and it appears to the House and thereby to the public that the Government have misused their powers and if the opposition resorts to any sort of obstruction with which they are threatening now perhaps the public sympathy will be on their side Now, as it is, the public sympathy will not be on their side because they have not allowed any opportunity for the Government to come forward with grounds or with reasons for taking over these two banks under their control.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಪುಟ್ಟಸ್ವಾಮಿಯವರು ನನಗೆ ಒಂದು ಸಲಹೆ ಕೂಡ ಮಾಡಿರುವುದು ಬಹಳ ಸಂತೋಷ. ನಾನು ಒಪ್ಪಿಕೊಳ್ಳುತ್ತೇನೆ. ನಾನು ಈ ಸಭೆಯಲ್ಲಿ ಡಿಸ್ ಒಬಿಡಿಯೆನ್ಸ್ ಮಾಡಬೇಕು ಎನ್ನುವ ದೃಷ್ಟಿಯಿಂದ ಹೇಳಲಿಲ್ಲ. ತಾವು ಏನು ಒಂದು ನೋಟಿಫಿಕೇಷನ್ ಇಡಬೇಕು ಎಂದು ಮಾಡಿದ್ದೀರೋ ಆದರಂತೆ ರೂಲ್ 51ರ ಪ್ರಕಾರ ಯಾವುದೇ ಒಂದು ಸಂಸ್ಥೆಯನ್ನು ಸರ್ಕಾರ ತನ್ನ ಅಧಿಕಾರಕ್ಕೆ ವಹಿಸಿಕೊಂಡ ಮೇಲೆ ನೋಟಿಫಿಕೇಷನ್‌ನ್ನು ಈ ಸಭೆಯ ಮುಂದೆ ಇಡಬೇಕು. ಇಂಥಾ ದಿವಸವೇ ಇಡಬೇಕು ಎಂದು ಇಲ್ಲ, ಈ ಸಭೆ ಮುಗಿಯುವುದರೊಳಗೆ ಯಾವತ್ತಾದರೂ ಇಡಬಹುದು. ಈ ಪೊತ್ತಿನ ದಿವಸ ಆ ನೋಟಿಫಿಕೇಷನ್ನು ತಡೆಹಿಡಿದರೆ ನಿಮ್ಮ ಅಸ್ತಿತ್ವದಲ್ಲಿರತಕ್ಕಂಥಾದ್ದನ್ನು ನಾವು ಕಿತ್ತುಕೊಳ್ಳುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಆ ಸಂಸ್ಥೆಗಳನ್ನು ನಿಮ್ಮ ವಶಕ್ಕೆ ತೆಗೆದುಕೊಂಡಿದ್ದೀರಿ. ಕಾನೂನು ಪ್ರಕಾರ ನೋಟಿಫಿಕೇಷನ್‌ನ್ನು ಸಭೆಯ ಮುಂದೆ ಇಡಬೇಕು ಅದಕ್ಕೊಸ್ಕರ ಇಡುತ್ತೀರಿ. ಇದು ಕಾನೂನು ಬಾಹಿರವಾದ ಘಟನೆ ಆಲ್ಲ. ತಾವು ಈ 19 ಜಿಲ್ಲಾ ಬ್ಯಾಂಕುಗಳು ಈ ಪೊತ್ತಿನ ದಿವಸ ಯಾವರೀತಿ ಕೆಲಸ ಮಾಡುತ್ತಿವೆ, ರಿಸರ್ವ್ ಬ್ಯಾಂಕ್‌ನಿಂದ ಜಿಲ್ಲಾ ಬ್ಯಾಂಕುಗಳಿಗೆ ಏನು ಆಪತ್ತಾನೆ ಮಾಡಿದ್ದಾರೆ, ಅಪೆಕ್ಸ್ ಬ್ಯಾಂಕ್‌ನಿಂದ ಜಿಲ್ಲಾ ಬ್ಯಾಂಕುಗಳಿಗೆ ಏನು ಆಪಾದನೆ ಮಾಡಿದ್ದಾರೆ, ಯಾವ ಯಾವ ಬ್ಯಾಂಕುಗಳಲ್ಲಿ ಹಣ ದುರುಪಯೋಗವಾಗಿದೆ ಅವುಗಳನ್ನೇ ಸೇರಿಸಿ ಒಂದು ಪಟ್ಟಿ ನಮಗೆ ಕೊಟ್ಟರೆ ಆದರ ಬಗ್ಗೆ ಚರ್ಚೆ ಮಾಡೋಣ. ಆದು ಬಿಟ್ಟು ದೇಶದಲ್ಲಿರುವ 19 ಜಿಲ್ಲೆಗಳಲ್ಲಿ ಕೇವಲ ಈ ಎರಡು ಬ್ಯಾಂಕುಗಳನ್ನೇ ತಮ್ಮ ವಶಕ್ಕೆ ತೆಗೆದುಕೊಂಡಿರುವುದು ಸಾಧುವಾದುದಲ್ಲ. ಇವಕ್ಕಿಂತಲೂ ಕೀಳುಮಟ್ಟದಲ್ಲಿ ನಡೆಯುತ್ತಿರುವ ಬ್ಯಾಂಕ್‌ಗೆ ಯಾವರೀತಿ ಫೋಷಣೆ ಕೊಟ್ಟಿದ್ದೀರಿ, ಅದನ್ನು ತಿಳಿದುಕೊಂಡರೆ ಅರ್ಥವಾಗುತ್ತದೆ. ನಾವು ಈ ಸಭೆಯ ಕಾರ್ಯಕಲಾಪಗಳನ್ನು ತಡಗಟ್ಟಬೇಕು ಎನ್ನುವ ಉದ್ದೇಶ ನಮಗೆ ಇಲ್ಲ. ಇದನ್ನು ಯಾವರೀತಿಯಾಗಿಯೂ ಅಪಹಾಸ್ಯ ಮಾಡಬೇಕು ಎನ್ನುವ ಉದ್ದೇಶ ಇಲ್ಲ. ನಾನು ತಮ್ಮನ್ನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಪೊತ್ತು ಈ ನೋಟಿಫಿಕೇಷನ್ನು ತಡೆ ಹಿಡಿದು ರಾಜ್ಯದ 19 ಜಿಲ್ಲಾ ಬ್ಯಾಂಕುಗಳ ಕೆಲಸಕಾರ್ಯಗಳ ವಿವರಣೆಯನ್ನು ಕೊಟ್ಟು ನಮ್ಮ ಜೊತೆಗೆ ಸಹಕರಿಸಬೇಕು ಎಂದು ಮತ್ತೊಂದು ಸಾರಿ ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ಅರ್ಧ ಗಂಟೆ ವಿರಾಮ ಕೊಟ್ಟರೆ ಈ ಪ್ರಶ್ನೆ ಇತ್ಯರ್ಥವಾಗಬಹುದೆನೋ ಎಂದು ನನಗೆ ಅನಿಸುತ್ತದೆ.

MADAM SPEAKER.—The laying of notification is held over. The House will adjourn and re-assemble at Five of the Clock.

The House rose at four of the Clock and re-assembled at Five Munites past five of the Clock.

[MADAM SPEAKER in the Chair.]

Mysore Sales Tax Amendment Bill, 1973—Introduction)

MADAM SPEAKER.—Now we will pass on to the next item the introduction of the Bill. Before I call upon the Minister, I announce that I have received a message from the Governor recommending the introduction of the Mysore Sales Tax Bill 1973.

Sri H. N. NANJE GOWDA (Minister of State for Major Irrigation) : Introduce the Mysore Sales Tax (Amendment) Bill 1973.

MADAM SPEAKER.—Bill is introduced. * *

Supply of of inadeguate rice in Belgaum.

ಶ್ರೀ ಪಾಟಾಳ್ ನಾಗರಾಜ್ (ಚಾಮರಾಜಪೇಟೆ).—ಅಧ್ಯಕ್ಷರೇ, ಬೆಳಗಾಂನಲ್ಲಿ ಜನರಿಗೆ ಒಬ್ಬರಿಗೆ ದಿನಕ್ಕೆ ದೊಡ್ಡವರಿಗೆ 2 ಗ್ರಾಂ ಅಕ್ಕಿಯನ್ನು ಕೊಡುತ್ತಿದ್ದಾರಂತೆ. ಅದು ಬಹಳ ಅನ್ಯಾಯ. ಅಷ್ಟರಲ್ಲಿ ಜೀವಿಸಿಕೊಂಡು ಇರುವುದಕ್ಕೆ ಸಾಧ್ಯವೇ ? ತಿಂಗಳಿಗೆ 180 ಗ್ರಾಂ ಕೊಡುವುದೆಂದರೆ ಇದಕ್ಕಿಂತ ದೊಡ್ಡ ಅನ್ಯಾಯ ಇನ್ನಾವುದು ಬೇಕು ?

ಅಧ್ಯಕ್ಷರು.—ಮಾನ್ಯ ಸದಸ್ಯರು ಇನ್ನು ಮೇಲೆ ಇಂಥಾ ವಿಷಯಗಳನ್ನು ನಥೆಯಲ್ಲಿ ಕರಾಪಿಕ ತರಬಾರದೆಂದು ಹೇಳುತ್ತೇನೆ.

ಶ್ರೀ ಪಾಟಾಳ್ ನಾಗಾರಾಜ್.—ಹಾಗಾದರೆ ಜನರು ಯಾರೂ ಸದಸ್ಯರಿಗೆ ಇನ್ನು ಮುಂದೆ ಇಂಥ ವಿಚಾರಗಳನ್ನು ಕುರಿತು ಕಾಗದ ಪತ್ರಗಳನ್ನು ಬರೆಯಬಾರದೆಂದು ಒಂದು ಕಾನೂನು ಮಾಡಿದರೆ...

ಅಧ್ಯಕ್ಷರು.—ಮಾನ್ಯ ಸದಸ್ಯರು ದಯವಾಡಿ ಕುಳಿತುಕೊಳ್ಳಬೇಕು.

Budget Estimates for 1973-74 - General Discussion (Debate continued)

ಶ್ರೀ ಜೆ. ಎಸ್. ಅಮ್ಮಣ್ಣವರ್ (ಸಾದಲಗ).—ಇನ್ನು ನಮ್ಮ ಈ ಅಂದಾಜು ಪಟ್ಟಿಯಲ್ಲಿ ಜಮೆಯ ಬಾಬುಗಳೇನಿವೆ ಅವುಗಳಲ್ಲಿ ಬರಬೇಕಾದ ಹಣ ಬಹಳವಾಗಿ ಹಾಗೇ ನಿಂತು ಹೋಗಿದೆ. ಆಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಕೇಸುಗಳು 1965 ರಿಂದ 1973ವರೆಗೂ ಇತ್ಯರ್ಥವಾಗದೇ ಇರುವುದರಿಂದ ಬರಬೇಕಾದ ಹಣ ಒಂದೇ ಸಮನಾಗಿ ಮುಂದುವರಿದುಕೊಂಡು ಬರುತ್ತಿದೆ. ಹೀಗೆ ಬರುವ ಹಣವನ್ನು ಕೇಸುಗಳು ಇತ್ಯರ್ಥವಾಗದ ಮೂಲಕ ನಿಲ್ಲಿಸಿಕೊಂಡು ಹೋಗುವುದು ಸರಿಯಲ್ಲ. ಆಯಾ ವರ್ಷದ ಬಾಕಿಯನ್ನು ಆಯಾ ವರ್ಷದಲ್ಲೇ ಅದನ್ನು ನಿಖರವೆ ಮಾಡಿಕೊಂಡು ಹೋಗುವುದು ಒಳ್ಳೆಯದು.

ಇನ್ನು ವಿದ್ಯಾಭ್ಯಾಸದ ವಿಚಾರದಲ್ಲಿ ಹೇಳುವುದಾದರೆ—ಹಿಂದೆ ಪಾಸಾಗುತ್ತಿದ್ದ ಹುಡುಗರ ಸಂಖ್ಯೆಯನ್ನು ಇತ್ತೀಚೆಗೆ ಪಾಸಾಗತಕ್ಕ ಹುಡುಗರ ಸಂಖ್ಯೆಗೆ ಹೋಲಿಸಿದಾಗ ಇತ್ತೀಚೆಗೆ ಪರೀಕ್ಷೆಗಳಲ್ಲಿ ಫೇಲಾಗತಕ್ಕ ವಿದ್ಯಾರ್ಥಿಗಳ ಸಂಖ್ಯೆ ಬಹಳ ಹೆಚ್ಚಾಗುತ್ತಿದೆ. ಇದಕ್ಕೇನು ಕಾರಣ ಎಂಬುದನ್ನು ಕಂಡುಹಿಡಿಯುವುದಕ್ಕಾಗಿ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ನಾನು ಸಲಹೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ನಾನು 30 ವರ್ಷಗಳ ಹೆಡ್‌ಮಾಸ್ಟರ್ ಕೆಲಸಮಾಡಿ ನಿವೃತ್ತಿ ಹೊಂದಿರತಕ್ಕ ಒಬ್ಬ ಶ್ರೀ ಶರ್ಮಾ ಎಂಬ ಉಪಾಧ್ಯಾಯರನ್ನು ಕೇಳಿದ್ದಕ್ಕೆ ಅವರು ಹೇಳಿದರು ಅವರ ಪೂರ್ಣ ಸರ್ವೀಸಿನಲ್ಲಿ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳಲ್ಲಿ ಒಬ್ಬನು ಮಾತ್ರ ಫೇಲಾಗಿ ಇನ್ನೊಬ್ಬ ವಿದ್ಯಾರ್ಥಿ ಮೂರನೇ ದರ್ಜೆಯಲ್ಲಿ ಪಾಸಾಗಿದ್ದಾನೆಂದು ಹೇಳಿದರು. ಅಂದರೆ ಹಿಂದೆ ಯಾವ ಯಾವ ಪ್ರಮಾಣದಲ್ಲಿ ವಿದ್ಯಾರ್ಥಿಗಳು ಪಾಸಾಗುತ್ತಿದ್ದರೆಂಬುದು ಅವರ ಹೇಳಿಕೆಯಿಂದ ವೇದ್ಯವಾಗುತ್ತದೆ.

ಇನ್ನು ಸರ್ಕಾರಿ ನೌಕರಿಯಲ್ಲಿ ನೇರತಕ್ಕ ತಕ್ಸೀರ್‌ದಾರ, ಅಸಿಸ್ಟೆಂಟ್ ಕಮಿಷನರ್, ಅಮಾ ಜನರೇನಿದಾರೆ ಅವರನ್ನು ಅವರವರ ಸ್ವಂತ ತಾಲ್ಲೂಕುಗಳಲ್ಲಿ ಕೆಲಸಕ್ಕೆ ನೇಮಕ ಮಾಡಬಾರದೆಂದು ಅಷ್ಟೇಅಲ್ಲ ಅವರನ್ನು ಅವರ ಜಿಲ್ಲೆಯಲ್ಲೂ ಕೂಡ ಹಾಕದೆ ಬೇರೆ ಜಿಲ್ಲೆಗಳಲ್ಲಿ ಕೆಲಸಕ್ಕೆ ಹಾಕಬೇಕೆಂದು ಹೇಳುತ್ತಿದ್ದೇನೆ. ಇಲ್ಲವಾದರೆ ಸರ್ಕಾರಿ ಕೆಲಸಕಾರ್ಯಗಳು ಸರಿಯಾಗಿ ನಡೆಯುವುದಿಲ್ಲ. ನಮ್ಮ ಕಡೆ ಒಬ್ಬ ಪಿ. ಎಸ್. ಐ. ನ್ನು ಸಡಲಗಾದಿಂದ ಒಂದಾವರ್ತಿ ವರ್ಗ ಮಾಡಿದಂತೆ ಮಾಡಿ ಮತ್ತೆ

* * The Bill is appended as annexure to this volume.